ಆಪ್ತರ ಪ್ರತಿಕ್ರಿಯೆಗಿಂತ ಹೊರತಾಗಿ ಬರುವ ವಿಮರ್ಶೆಯನ್ನು ನಾನು ಕುತೂಹಲದಿಂದ ಓದುತ್ತೇನಾದರೂ ಅದರಿಂದ ನೊಂದದ್ದಿಲ್ಲ. ಆದರೆ ವಿಮರ್ಶೆಯ ಮಾತುಗಳನ್ನು ಬರೆಯುವಾಗ ನನ್ನ ಬರವಣಿಗೆಯ ಆಶಯವನ್ನೇ ಅರ್ಥಮಾಡಿಕೊಳ್ಳದೇ, ಅದಕ್ಕೊಂದು ಹಣೆಪಟ್ಟಿ ಹಚ್ಚಿ ಜಾತಿಯನ್ನು, ನನ್ನ ಕೆಲಸದ ಸಂದರ್ಭದಿಂದ ನನ್ನ ವಿಚಾರವಾದ ಹೀಗಿರಬಹುದು ಎಂದು ಊಹಿಸಿ ಟೀಕಿಸುವ ವಿಮರ್ಶೆಗಳು ತುಸು ಬೇಸರವನ್ನು ತರುತ್ತದೆನ್ನುವುದು ನಿಜ. ಆದರೆ ಅಪಾರ್ಥಗೊಳ್ಳುವುದೂ ಜೀವನದ ವಾಸ್ತವವೇ ಅಲ್ಲವೇ...

ನಾನು ಕನ್ನಡ ಕಥಾಲೋಕಕ್ಕೆ ಸಹಜವಾಗಿ ಬಂದವನಲ್ಲ. ಭಾಷೆ – ನಿರೂಪಣಾ ಭವ್ಯತೆ ಅಥವಾ ಕಥನ ಸಂಭ್ರಮ ನನ್ನ ಗುಣವಲ್ಲ. ಹೀಗಾಗಿ ಕನ್ನಡ ಕಥಾಪರಂಪರೆಯಲ್ಲಿ ನನಗೆ ಯಾವುದೇ ಸ್ಥಾನ ಸಿಕ್ಕರೂ ಅದನ್ನು ಅಯಾಚಿತ ಆಶೀರ್ವಾದವೆಂದೇ ಪರಿಗಣಿಸುತ್ತೇನೆ. ನನ್ನ ವಾರಗೆಯವರಲ್ಲೇ ತುಂಬಾ ಉತ್ತಮ ಕತೆಗಾರರಿದ್ದಾರೆ, ಯುವ ಪೀಳಿಗೆಯಲ್ಲೂ ನನಗೆ ಅಸೂಯೆ ಉಂಟುಮಾಡುವ ಕಥನ ಕೌಶಲವಿರುವ– ಅದ್ಭುತ ಕತೆಗಳನ್ನು ಹೆಣೆಯುವ ಕತೆಗಾರರಿದ್ದಾರೆ. ವಿವೇಕ ಶಾನಭಾಗ, ಅಬ್ದುಲ್ ರಶೀದ್, ಗುರುಪ್ರಸಾದ್ ಕಾಗಿನೆಲೆ, ನಾಗರಾಜ ವಸ್ತಾರೆಯಂಥರ ಕತೆಗಾರರನ್ನು ನಾನು ಬೆರಗಿನಿಂದ ಓದುತ್ತೇನೆ. ಜೊತೆಗೆ ಕತೆಗಾರ ಜಯಂತ ಕಾಯ್ಕಿಣಿ ಮತ್ತು ಕೆ.ವಿ. ತಿರುಮಲೇಶ... ಒಬ್ಬೊಬ್ಬರೂ ಎಷ್ಟು ಭಿನ್ನವಾದ ಜಗತ್ತನ್ನು ನಮ್ಮ ಮುಂದೆ ತೆರೆದಿಡುತ್ತಾರೆ... ಎಷ್ಟು ಸಹಜವಾಗಿ ಬರೆಯುತ್ತಾರೆ... ಇಂಥ ಸಹಚರರ (ಮತ್ತು ಹಿರಿಯರ) ನಡುವೆ ನನ್ನ ಪಾತ್ರವು ಕಿರಿದಾದದ್ದೇ. ಆದರೂ ಅವರ ಸರಿಸಮನಾಗಿ ನಿಲ್ಲುವ ಯತ್ನ ಮತ್ತು ನಾಟಕ ಮಾಡುವುದನ್ನು ಕಲಿತಿದ್ದೇನೆ.

ಒಟ್ಟಾರೆ ನನ್ನ ಸಮಕಾಲೀನರಿಂದ ನಾನು ಕತೆಗಾರನಾಗಿ ದಕ್ಕಿಸಿಕೊಳ್ಳಬೇಕಾದದ್ದು ಏನು ಎಂದು ಕೇಳಿದಾಗ ನನಗೆ ಹೊಳೆಯುವುದು ಇದು. ದಿವಾಕರರಿಂದ ಕಥನ ತಂತ್ರ, ಕುಂ.ವೀಯವರಿಂದ ಕಥನ ಸಂಭ್ರಮ, ಬೊಳುವಾರರ ನಿರೂಪಣಾ ಶೈಲಿ, ಜಯಂತ ಕಾಯ್ಕಿಣಿಯ ಪಾತ್ರಗಳು, ತಿರುಮಲೇಶರ ವಸ್ತು ಗಾಂಭೀರ್ಯ, ರಶೀದನ ತುಂಟತನ, ವಸ್ತಾರೆಯ ಭಾಷಾ ನಾವೀನ್ಯ, ಕಾಗಿನೆಲೆ ತಮ್ಮದಾಗಿಸಿಕೊಳ್ಳುವ ಅನ್ಯರ ಅನುಭವಗಳ ರೀತಿ, ವಿವೇಕ ಶಾನಭಾಗರ ವಿವರದ ಕುಸುರಿ... ಎಂದರೋ ಮಹಾನುಭಾವುಲು... ಇವರೆಲ್ಲರನ್ನೂ ಕಂಡಾಗ ಎಷ್ಟೆಲ್ಲಾ ಶ್ರೀಮಂತಿಕೆ ನಮ್ಮಲ್ಲಿ ಈಗ, ಕಾಣಕಾಣುತ್ತಿರುವಂತೆಯೇ ಇದೆ ಅನ್ನಿಸುತ್ತದೆ. ಆದರೂ ನಮ್ಮ ವಿಮರ್ಶಕರು ಕನ್ನಡ ಸಾಹಿತ್ಯದಲ್ಲಿ ಹೊಸದು ಬಿಗ್‌ಬ್ಯಾಂಗ್ ಏನೂ ಆಗಿಲ್ಲ ಎಂದು ಪ್ರಲಾಪಿಸುವುದನ್ನು ಕೇಳಿದ್ದೇವೆ. ಬಹುಶಃ ನಾವು ಇತರರ ಸಾಧನೆಗಳನ್ನು ಹೊಟ್ಟೆಯುರಿಯಿಂದಲೇ ಸಂಭ್ರಮಿಸುವುದನ್ನು ಕಲಿತಿಲ್ಲವೇನೋ. ಬಿಗ್‌ಬ್ಯಾಂಗ್ ಇಲ್ಲವೆಂದು ಅನ್ನಿಸಿದರೂ ಈ ಎಲ್ಲರ ಸಣ್ಣ ಸಣ್ಣ ವೈಯಕ್ತಿಕ ಸಾಧನೆಗಳು ನಮ್ಮ ಕಥಾಲೋಕವನ್ನು ಎಷ್ಟು ಶ್ರೀಮಂತಗೊಳಿಸಿವೆ ಅನ್ನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಒಮ್ಮೆ ದೀಪಾವಳಿ ಕಥಾ ಸ್ಪರ್ಧೆಯ ತೀರ್ಪುಗಾರನಾಗಿ, ಒಮ್ಮೆ ಟೋಟೋ ಪ್ರಶಸ್ತಿಯ ತೀರ್ಪುಗಾರನಾಗಿ, ಒಮ್ಮೆ ಛಂದ ಬಹುಮಾನದ ತೀರ್ಪುಗಾರನಾಗಿ ಅನೇಕ ಯುವ ಹೊಸ ಕತೆಗಾರರ ಬೆರಗಿನ ಲೋಕದಲ್ಲೂ ವಿಹರಿಸಿದ್ದಾಗಿದೆ. ಇದು ನಿಜಕ್ಕೂ ಕಥನ ಲೋಕದ ಶ್ರೀಮಂತಿಕೆಯನ್ನು ನನಗೆ ತೋರಿಸಿಕೊಟ್ಟಿದೆ.